ಕಳೆದ ಮೂರು ವರ್ಷಗಳಿಂದ ಹಂಚಿಕೆ ಮಾಡಿದ ನಿವೇಶನಗಳ ವಿವರ ಈ ಕೆಳಗಿನಂತಿದೆ.

ಹಂಚಿಕೆ ಮಾಡಲಾದ ನಿವೇಶನಗಳ ವಿವರ

ಕ್ರ.ಸಂ.	ಶ್ರೇಣಿ	ಗ್ರಾಮೀಣ	ನಗರ	ಒಟ್ಟು
1	2009–10	2959	2519	5478
2	2010–11	22992	16983	39975
3	2011–12	3595	2203	5798
	ಒಟ್ಟು	29546	21705	51251

(ತಾಲ್ಲೂಕು ಮತ್ತು ಪಟ್ಟಣವಾರು ವಿವರವನ್ನು ಅನುಬಂಧ 'ಆ' ದಲ್ಲಿ ಲಗತ್ತಿಸಿದೆ.)

ಪರಿಶಿಷ್ಟ ಜಾತಿ / ವರ್ಗದ ನಿರುದ್ಯೋಗ ಯುವಜನತೆಗೆ ಉದ್ಯೋಗಾವಕಾಶ

179 (506) ಶ್ರೀ ಯು.ಟಿ. ಖಾದರ್ ಮಂಗಳೂರು :– ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಸರ್ಕಾರ ಸ್ವಯಂ ಉದ್ಯೋಗ ಕಲ್ಪಿಸಲು ತೆಗೆದುಕೊಂಡ ಕ್ರಮಗಳೇನು;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ/ವರ್ಗದ ನಿರುದ್ಯೋಗಿ ಯುವ ಜನತೆಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಅನುದಾನವೆಷ್ಟು ? (ಕ್ಷೇತ್ರವಾರು ವಿವರ ಒದಗಿಸುವುದು)

ಶ್ರೀ ಎ. ನಾರಾಯಣ ಸ್ವಾಮಿ :– (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):–

ಅ) ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿಯ ನಿರುದ್ಯೋಗಿ ಯುವ ಜನತೆಗೆ ಸಹಾಯಧನ, ಸಾಲ ಸೌಲಭ್ಯಗಳ ಮತ್ತು ಸ್ವಯಂ ಉದ್ಯೋಗ ಕಲ್ಪಿಸಲು ಕ್ರಮಕೈಗೊಳ್ಳಲಾಗಿದೆ.

ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವ ಜನತೆಗೆ ವಿಶೇಷ ಕೇಂದ್ರೀಯ ನೆರವಿನಡಿಯಲ್ಲಿ ಸ್ವಯಂ ಉದ್ಯೋಗ ಹೊಂದುವಂತಹ ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಇದರಂತೆ ಹೈನುಗಾರಿಕೆ ಹಾಗೂ ಸ್ವಸಹಾಯ ಸಂಘಗಳ ಸದಸ್ಯರುಗಳಿಗೆ ಸ್ವಯಂ ಉದ್ಯೋಗ ಹೊಂದಲು ಸಹಾಯ ಧನ ಮಂಜೂರು ಮಾಡಲಾಗಿದೆ.

ಆ) ಅನುಬಂಧ ಲಗತ್ತಿಸಿದೆ.

ಅನುಬಂಧ-1

ಪರಿಶಿಷ್ಟ ಜಾತಿ

ಕ್ರ.ಸಂ	ಕ್ಷೇತ್ರ	2008-09		2009-10		2010-11		ಒಟ್ಟು	
		ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ
1	ಮಂಗಳೂರು ಕೇಂದ್ರ	2	3.52	0	-	6	7.43	8	10.95
2	ಮಂಗಳೂರು ಉತ್ತರ	33	7.34	5	13.09	9	3.20	47	23.63
3	ಮಂಗಳೂರು ದಕ್ಷಿಣ	51	11.19	7	1.80	12	9.83	70	22.82
4	ಮೂಲ್ಕಿ-ಮೂಡಬಿದ್ರೆ	32	3.71	6	3.66	36	7.41	74	14.78
5	ಬೆಳ್ತಂಗಡಿ	19	9.88	11	4.63	19	7.48	49	21.99
6	ಬಂಟ್ವಾಳ	2	1.20	5	5.45	24	9.63	31	16.28
7	ಪುತ್ತೂರು	2	0.40	2	2.05	15	16.18.	19	18.63
8	ಸೂಳ್ಯ	8	1.60	8	4.73	41	8.77	57	15.10
	ಒಟ್ಟು	149	38.84	44	35.41	162	69.93	355	144.18

ಪರಿಶಿಷ್ಟ ಪಂಗಡ

ಕ್ರ.ಸಂ	ಕ್ಷೇತ್ರ	2008-09		2009-10		2010-11		ಒಟ್ಟು	
		ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ	ಫಲಾನುಭವಿಗಳ ಸಂಖ್ಯೆ	ಒಟ್ಟು ವೆಚ್ಚ
1	ಮಂಗಳೂರು ಕೇಂದ್ರ	-	-	-	-	47	4.70	47	4.70
2	ಮಂಗಳೂರು ಉತ್ತರ	-	-	10	1.50	-	-	10	1.50
3	ಮಂಗಳೂರು ದಕ್ಷಿಣ	-	-	-	-	3	0.30	3	0.30
4	ಮೂಲ್ಕಿ-ಮೂಡಬಿದ್ರೆ	-	-	-	-	-	-	-	-
5	ಬೆಳ್ತಂಗಡಿ	30	3.50	12	1.80	50	5.00	92	10.30
6	ಬಂಟ್ವಾಳ	70	8.50	170	17.50	70	7.00	310	33.00
7	ಪುತ್ತೂರು	30	3.50	-	-	60	6.00	90	9.50
8	ಸೂಳ್ಯ	20	3.00	-	-	50	5.00	70	8.00
	ಒಟ್ಟು	150	18.50	192	20.80	280	28.00	622	67.30